ಮೇಲೆ ಗಂಡಿನ ಕಡೆಯವರು ಇಲ್ಲಿ ಕೂತು ಅಧಿಕಾರ ಚಲಾಯಿಸಬಹುದೆಂಬ ದೂರದ ಆಲೋಚನೆ.

ಏನಾದರೂ ಜಂಬರ ಜಟ್ಟಿ ಆಗುವಾಗ ಎರಡೂ ಕರೆಯವರಿಗೂ ಇರಲಿ ಅಂತ ಮಾವ ಖಾಲಿ ಬಿಟ್ಟ ಜಾಗದ ಮೇಲೆ ಅದಾಗಲೇ ಕಣ್ಣು ಹಾಕಿದ್ದಳು. ಇನ್ನೆಂತ ಇಲ್ಲಿ 'ಜಂಬರ' ತೆಗೆಯುತ್ತೇವೆ? ಹೊರಗೆ ಬಾಡಿಗೆಗೆ ಬೇಕಾದಷ್ಟು ಹಾಲ್ ಸಿಗುತ್ತವೆ. ಆ ಜಾಗದಲ್ಲಿ ಈ ಸಲ ಅಡಿಕೆ ದೈ ಹಾಕಬೇಕೂಂತ ಗಂಡನ ಪೀಡಿಸುವುದೇ ಆಯ್ತು. ಒಳಗೊಳಗಿನ ಪೈಪೋಟಿಯೂ ಇದಕ್ಕೆ ಮುಖ್ಯ ಕಾರಣವೆನ್ನಿ. ಆಚೆ ಬದಿಯ ಕಮಲಕ್ಕನ ತೋಟಕ್ಕೆ ಹಳದಿರೋಗ ಬಂದು ಅಡಿಕೆ ಮರ ಸಾಯಲು ಶುರುವಾದಾಗ ಮೊದಲು ಸಂಭ್ರಮಿಸಿದವಳೇ ಸರೋಜ. ತನ್ನದು ಹೊಳೆಬದಿಯ ತೋಟ, ಸದಾ ತಂಪು, ತನ್ನ ತೋಟಕ್ಕೆ ಏನು ಆಗಲಾರದು ಅನ್ನುವ ಯೋಚನೆ ಆಕೆಯದು.

* * *

ಆ ಸಲ ಅದೆಂತ ಹುಚ್ಚುಗಟ್ಟಿ ಮಳೆ ಸುರಿಯಿತು ಅಂದರೆ, ಹಗಲು ರಾತ್ರೆ ಒಂದೇ ಎಂಬಂತೆ. ಯಾರೂ ಈ ಮಳೆ ಅಂತಹ ಅನಾಹುತ ಮಾಡಬಹುದೆಂದು ಕನಸು ಮನಸಿನಲ್ಲೂ ಅಂದುಕೊಂಡಿರಲಿಲ್ಲ.

ಆ ದಿನವೂ ಆಗಸ ಕತ್ತಲುಗೂಡಿತು. ಆದರೆ, ಇಲ್ಲಿ ಅಷ್ಟೊಂದು ಮಳೆ ಬೀಳಲಿಲ್ಲ. ಎಲ್ಲೋ ಆಚೆ ಬದಿಯಲ್ಲಿ ತುಂಬಿ ಹೊಯ್ದ ಮಳೆಗೆ ಇಲ್ಲಿ ಹೊಳೆ ತುಂಬಿ ಹರಿದದ್ದು ಗೊತ್ತೇ ಆಗಲಿಲ್ಲ. ಮೂಲೆಮನೆ ರಮೇಶಣ್ಣ ಹೊಳೆಗೆ ಇಳಿದು, ಪಂಪು ಕೊಚ್ಚಿ ಹೋಗುವುದಕ್ಕೆ ಮುಂಚೆ ತಂದೊಮ್ಮೆ ದಡಕ್ಕೆ ಇಟ್ಟುಬಿಡುವನೆಂದು ಪ್ರಯತ್ನಿಸುತ್ತಿರುವಾಗಲೇ ಎದೆಮಟ್ಟ ನೀರು ತುಂಬಿ ಅವನ ಸೆಳೆದುಕೊಂಡು ಹೋಗುವಾಗಲೇ ಗೊತ್ತಾದದ್ದು. ಏನು ಮಾಡಿದರೂ ಅವನಿಗೆ ದಡ ಸಿಕ್ಕುತ್ತಿಲ್ಲ. ಹೇಗೋ ಸಿಕ್ಕ ಮರದ ಕಾಂಡವನ್ನು ಹಿಡಿದುಕೊಂಡು ಕಷ್ಟ ಪಡುತ್ತಿರುವಾಗ ಹೊಳೆಯಲ್ಲಿ ಬರುತ್ತಿರುವ ತೆಂಗಿನಕಾಯಿಯನ್ನು ಎತ್ತಿ ಎತ್ತಿ ಗೋಣಿ ಚೀಲಕ್ಕೆ ತುಂಬಿಸುತ್ತಿದ್ದ ಮಂಕ್ರನೇ ರಮೇಶಣ್ಣನಿಗೆ ಉದ್ದನೆಯ ಕೋಲು ಕೊಟ್ಟು ಅವನ ದಡ ಸೇರಿಸಿದ್ದು.

ಕಮಲಕ್ಕ ಒಂದಾವರ್ತಿಯ ಕೆಲಸ ಮುಗಿಸಿ ಪೋನು ತೆರೆದು ನೋಡಿದರೆ ಎಲ್ಲಾ ಕಡೆ ಸುದ್ದಿ ನೀರಿನದೆ. ಮಣ್ಣುಗುಂಡಿ, ಕಜೆಬೈಲು ಗ್ರಾಮದ ಮನೆಗಳಿಗೆ ನೀರು ನುಗ್ಗಿ ಮನೆಮಂದಿಯನ್ನ ಸುರಕ್ಷಿತ ಸ್ಥಳಗಳಿಗೆ ತಲುಪಿಸುತ್ತಿದ್ದಾರೆ ಅನ್ನುವ ಸುದ್ದಿ ವಾಟ್ಸಪ್‌ನಲ್ಲಿ ಹರಿದಾಡಿದಾಗ ಆಕೆಗೆ ಎದೆ ಜಗ್ಗನೆ ಬಡಿದುಕೊಂಡು ಮೊದಲು ನೆನಪಾದವಳೇ ಸರೋಜ. ಮನೆ ಮುಂದೆಯೇ ನೆರೆ ಬಂದರೂ ನಮಗೆ ಗೊತ್ತಾಗಲಿಲ್ಲವಲ್ಲ ಅಂತ ತನ್ನನ್ನು ತಾನೇ ಹಳಿದುಕೊಂಡು ಗಡಿಬಿಡಿಯಲ್ಲಿ ಪೋನು ಗುಂಡಿ ಒತ್ತಿದಳು.

ಎಷ್ಟು ಪ್ರಯತ್ನಿಸಿದರೂ ಗಂಡ ಸಂಪರ್ಕಕ್ಕೆ ಸಿಗುತ್ತಿಲ್ಲ. ಮೈದುನನ ಪೋನೂ ತಾಕುತ್ತಿಲ್ಲ.

'ಬೇಕಾದ್ದು ಬೇಕಾದ ಸಮಯದಲ್ಲಿ ಉಪಯೋಗಕ್ಕೆ ಬರುವುದಿಲ್ಲ, ಹಾಳಾದ ಪೋನು ಇದ್ದರೂ ಒಂದೆ, ಬೊಳ್ಳ ಹೋದರೂ ಒಂದೆ' ಅಂತ ಅದನ್ನತ್ತ ಮೂಲೆಗೆ ಒಗೆದು ಊರಿಗೆ ಉಪಕಾರಿ, ಮನೆಗೆ ಮಾರಿಗಳು ಅಂತ ಪರಂಚಿಕೊಳ್ಳುತ್ತಲೇ ಓಡುತ್ತಾ ಹೊಳೆಬದಿಗೆ ಬಂದರೆ ಮೈದುನನ ಮನೆಗೆ ಹಾದು ಹೋಗುವ ಪಾಲವೇ ಕಾಣುತ್ತಿಲ್ಲ. ಕೆಂಬಣ್ಣದ ನೀರು ಸಿಕ್ಕಿದ್ದನ್ನೆಲ್ಲಾ ಹೊತ್ತೊಯ್ಯುತ್ತಿದೆ. ಮರದ ದಿಮ್ಮಿಗಳು, ಬೊಳ್ಳ ಹೋಗುತ್ತಿರುವ ತೆಂಗಿನಕಾಯಿ! ಆಕೆಯ ಎದೆಯ ಬಡಿತ ಹೆಚ್ಚಾಗುತ್ತಿದೆ. ದೇವರೇ... ಕೊಚ್ಚಿ ಹೋಗಿದೆಯೋ, ಮುಳುಗಿ ಹೋಗಿದೆಯೋ? ಕಾಣುತ್ತಿಲ್ಲ. ಆ ಬದಿಯಲ್ಲಿ ಪಂಚಾಯಿತಿನವರು ಇತ್ತೀಚೆಗೆ ಒಂದು ಸೇತುವೆ ಕಟ್ಟಿದ್ದರು. ಮೈದುನ ಸೀನ ರಾಜಕೀಯದವರೊಂದಿಗೆ ಓಡಾಡಿದ ಕಾರಣ ಸಿಕ್ಕ ಒಂದೇ ಒಂದು ಫಲ ಎಂದರೆ ಈ ಸೇತುವೆ. ಅದರ ಮೇಲೂ ನೀರು ಹರಿಯುತ್ತಿತ್ತು. ಆದರೆ, ಪುಣ್ಯಕ್ಕೆ ದಾಟಬಹುದಿತ್ತು. ಆ ಹೊತ್ತಿನಲ್ಲೂ ಮಂಕ್ರ ನೀರಿನೊಂದಿಗೆ ಬರುತ್ತಿರುವ ತೆಂಗಿನ ಕಾಯಿಗಳನ್ನು ಜೀವಭಯ ಬಿಟ್ಟು ಹೆಕ್ಕುತ್ತಾ ಗೋಣಿಗೆ ತುಂಬುತ್ತಿದ್ದಾನೆ.

ಈ ಮಂಕ್ರನಿಗೆ ಮನೆಯಿಲ್ಲ- ಮಠವಿಲ್ಲ. ಆದರೂ ಅವನ ಭಾಗ್ಯ ಕಂಡು ಅದೆಷ್ಟು ಜನ ಕರುಬಿದವರೋ? ಊರೂರು ಸುತ್ತಿ ಹೊಳೆ ದಂಡೆಯ ಅವನ ಬಿಡಾರಕ್ಕೆ ಬರುವಾಗ ಪ್ರತೀ ಸಾರಿಯೂ ಹೊಸ ಹೆಂಡತಿಯೊಬ್ಬಳು ಇರುತ್ತಿದ್ದಳು. ಹಾಗಾಗಿ ಆಗಲಿಕ್ಕೆ ಮೂರು ನಾಲ್ಕು ಮದುವೆ ಆಗಿದೆ. ಆದರೇನು ಸುಖ? ಒಂದೆರಡು ವರುಷಕ್ಕಿಂತ ಹೆಚ್ಚು ದಿನ ಯಾವ ಹೆಂಡತಿಯೂ ಅವನೊಂದಿಗೆ ನೆಟ್ಟಗೆ ಸಂಸಾರ ಮಾಡಲಿಲ್ಲ. ಇವನು ಅವರನ್ನು ಬಿಡುತ್ತಾನೋ? ಅಥವಾ ಅವರೇ